ಅಮ್ಮಸಂದ್ರ ಡೈವಂಡ್ ಸಿಮೆಂಟ್ ಫ್ಯಾಕ್ಟರಿ.

೧೬೧೮. ಶ್ರೀಜಿ. ಎಸ್. ಶಿವನಂಜಪ್ಪ (ಗೌಬ್ಬಿ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಮ್ಮಸಂದ್ರ ಡೈವಂಡ್ ಸಿಮೆಂಟ್ ಫ್ಯಾಕ್ಟರಿಯಿಂದ ಅಪಾರವಾದ ಧೂಳು ಹೊರ ಬರುತ್ತಿರುವುದರಿಂದ ಪರಿಸರ ಮಾಲಿನ್ಯವಾಗಿದ್ದು ಸುಮಾರು ೭–೮ ಕಿ. ಮೀ. ಸುತ್ತ ಇರುವ ತೆಂಗಿನ ಮರಗಳು ಹಾಗೂ ಇನ್ನಿತರ ದೈವ ಪಸಲಿಗೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಪರಿಸರ ಮಾಲಿನ್ಯದಿಂದ ಜನ ಮತ್ತು ದನಕರುಗಳಿಗೆ ಆರೋಗ್ಯಕ್ಕೆ ಹಾನಿ ಉಂಟಾಗುವುದನ್ನು ತಡೆಗಟ್ಟಲು ಸರಕಾರದವರು ಕೈಗೊಂಡ ಕ್ರಮಗಳೇನು ?

ಇ) ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಎಸ್. ಕೆ. ಕಾಂತ (ಕಾರ್ಮಿಕ ಸಚಿವರು).—

ಅ) ಹೌದು.

ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕಾರ್ಖಾನೆಗೆ ಧೂಳನ್ನು ನಿಯಂತ್ರಿಸಲು ಸೂಕ್ತ ವಾಯು ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸಲು ಆದೇಶ ನೀಡಿತ್ತು. ಕಾರ್ಖಾನೆಯು ಸೂಕ್ತ ಕ್ರಮಗಳನ್ನು ಕೈಗೊಳ್ಳದೇ ಇದ್ದುದರಿಂದ ೭–೬–೮೬ರಲ್ಲಿ ತಿಪಟೂರಿನ ಮೊದಲ ದರ್ಜೆ ನ್ಯಾಯಿಕ ದಂಡಾಧಿಕಾರಿ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಹೂಡಿತು. ತದನಂತರ ೨೦–೫–೮೭ರಲ್ಲಿ ಮೊಕದ್ದಮೆಯನ್ನು ತುರುವೇಕೆರೆ ಪ್ರಥಮ ನಾಯಿಕ ದಂಡಾಧಿಕಾರಿಯವರ ನ್ಯಾಯಾಲಯಕ್ಕೆ ವರ್ಗಾಯಿಸಲ್ಪಟ್ಟಿತು. ತುರುವೇಕೆರೆ ನ್ಯಾಯಾಲಯವು ಸದರಿ ಉದ್ದಿಮೆಗೆ ೪೫ ದಿನಗಳೊಳಗಾಗಿ ನಿಯಂತ್ರಣ ಘಟಕಗಳನ್ನು ಅಳವಡಿಸಲು ೨೫–೧೨–೮೯ರ ತನ್ನ ಆದೇಶವನ್ನು ನೀಡಿತು. ಮತ್ತು ಹಾಗೆ ೪೫ ದಿನಗಳಲ್ಲಿ ಅಳವಡಿಸದೇ ಇದ್ದಲ್ಲಿ, ಉದ್ದಿಮೆಯಿಂದ ಧೂಳನ್ನು ಹೊರಗೆ ಬಿಡದಿರಲು ಆದೇಶಿಸಿತು.

ಉದ್ದಿಮೆಯು ರಾಜ್ಯದ ಉಚ್ಚನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿತು. ಉಚ್ಚನ್ಯಾಯಾಲಯವು ಜೂನ್ ೧೯೮೮ರವರೆಗೆ ತಡೆಯಾಜ್ಞೆಯನ್ನು ನೀಡಿದೆ.

ಇ) ಮೇಲ್ಕಂಡ ಕ್ರಮಗಳನ್ನು ಕೈಗೊಂಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹರಿಜನರಿಗೆ ಸಾಗುವಳಿ ಚೀಟಿ ಕೊಡುವುದು.

೧೬೩೦. ಶ್ರೀ ಜಿ. ಎಸ್. ಶಿವನಂಜಪ್ಪ (ಗೌಬ್ಬಿ).—ಮಾನ್ಯ ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತಿಪಟೂರು ಜಿಲ್ಲೆ ಮಧುಗಿರಿ ತಾಲ್ಲೂಕು ಕೊಟಗಾರಲಹಳ್ಳಿ ಸ. ನಂ. ೨೬೪ರ ಜಮೀನನ್ನು ಹರಿಜನರಿಗೆ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ (ಹಂಚಿರುವ ವಿವರವನ್ನು ಒದಗಿಸುವುದು).

ಆ) ಸದರಿ ಸರ್ವೆ ನಂಬರಿನಲ್ಲಿ ಸಾಗುವಳಿ ಕೊಟ್ಟಿರುವ ಜಮೀನಿಗೆ ಯಾರ ಯಾರ ಹೆಸರಿನಲ್ಲಿ ಪಹಣಿಯನ್ನು ಬರೆಯಲಾಗಿದೆ ?

ಇ) ಹರಿಜನರಿಗೆ ಜಮೀನು ದೊರೆಯುವಂತೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಈ) ಹಾಗಿಲ್ಲದಿದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಹರಿಜನರಿಗೆ ಮಂಜೂರು ಮಾಡಿರುವುದಿಲ್ಲ. ಆದರೆ ಸ. ನಂ. ೨೬೪/೧ ಬಿ ನಲ್ಲಿ ೨.೦೦ ಎಕರೆ ಜಮೀನನ್ನು ಲಿಂಗಮ್ಮ ಕೋಂ ತಿಮ್ಮಯ್ಯ (ವಾಲ್ಮೀಕಿ) ಇವರಿಗೆ ಹಂಚಿದೆ.